ಕೇಳುವ ಕುತೂಹಲದಲ್ಲಿ ನಾನು ಮಂಜಾಚಾರಿಯನ್ನು ಕಾದೆ.

ಚಾದಂಗಡಿಯ ಕಟ್ಟೆಯ ಮೇಲಿಟ್ಟ ಬಕೇಟಿನಿಂದ ಮಂಜಾಚಾರಿ ಮಗ್ಗು ನೀರೆತ್ತಿ ಕೈ ತೊಳೆಯುತ್ತಿದ್ದಾಗ ಮಾಲೀಕ, "ಆಚಾರ್ರೆ, ನಿಮ್ಮ ಯಾರೊ ಕಾಯ್ತಾ ಕೂತಾರೆ ಒಳಗೆ"ಎಂದು ಸೂಚನೆ ಕೊಟ್ಟ. ಉಟ್ಟ ಪಂಜಿಗೆ ಒದ್ದೆ ಒರೆಸುತ್ತ ಕಣ್ಣಗಲಿಸಿ ನೋಡಿದ. "ಅರೆರೆ ನೀವಿಲ್ಲಿ" ಎನ್ನುತ್ತ ನನ್ನೆದುರು ಬಾಂಕಿನ ಮೇಲೆ ಕೂತ. ಅವನ ಮುಖದಲ್ಲಿ ಪಿತ್ರಾರ್ಜಿತ ನಗು ಹೆಂಡತಿ ಪಕ್ಕದಲ್ಲಿ ಕೂರುವ ತನಕ ಉಕ್ಕುತ್ತಲೆ ಇತ್ತು. "ನಿನ್ನ ಹುಡುಕ್ತಾ ನಾನು ಮಾವಿನ ಕುರ್ವೆಗೆ ಹೋದ್ರೆ ನೀ ಇಲ್ಲಿ! ಬೇಜಾರಾಗಿ ಮನೆ ಬಿಟ್ಟು ಬಂದೆಯಂತೆ, ಅಪ್ಪನಿಗೆ ಚಿಂತೆ ಆಗಿದೆ. ಏನು ನಿನ್ನ ಕತೆ?" ವಿಚಾರಿಸಿದೆ. ಗ್ಲಾಸೆತ್ತಿ ಗಟಗಟನೆ ನೀರು ಕುಡಿದ. ಅವನ ಹೆಂಡತಿ ಸೆರಗಿನ ತುದಿಯಿಂದ ಸೆಖೆಗೆ ಗಾಳಿ ಬೀಸಿಕೊಳ್ಳುತ್ತಿದ್ದಳು.

**ನಾನು ಸಾಲೆಗೆ ಹೋಗಿ ಆ ವಿದ್ಯೆ ಕಲ್ತಂವಲ್ಲ. ಅದಕ್ಕೊಂದು ಲೆಕ್ಕಾಚಾರ ಸೂತ್ರ ಏನೂ ಇಲ್ಲ. ಗೊತ್ತಿದ್ದಿದ್ರೆ ಹೇಳಿ ಬಿಡ್ತಿದ್ದೆ ಅನಸ್ತದೆ. ಒಲೆ ಮುಂದೆ ಹತ್ಯಾರ ಕಾಯಿಸಿದಾಗ ಏನು ಹೊಳಿತದೊ ಅದೇ ಆ ಕ್ಷಣದಲ್ಲಿ ಮಾಡ್ತೇನೆ.**

"ಒಂದ್ಸಲ ಬೇಜಾರಾದ್ದು ಖರೆ. ಪ್ರಾಣದ ಹಂಗು ಬಿಟ್ಟು ಎಲ್ರ ಬಚಾವು ಮಾಡ್ದ ನನ್ನೇ ಮರ್ತ್ರೆ ಏನು ತಿಳ್ಕಳ್ಲಿ? ನೆಗ್ಸು ಬಂದಾಗ ನಾನೊಂದು ಮನೆ ಅಟ್ಟದ ಮ್ಯಾಲೆ ಸಿಕ್ಕಿ ಹಾಕ್ಕೊಂಡೆ. ನನ್ನ ಜತೆಗೆ ನಾಯೊಂದಿತ್ತು. ಮನಸು ಮಾಡಿದ್ರೆ ಅದು ಈಜಿ ಪಾರಾಗ್ತಿತ್ತೇನೊ. ಆದ್ರೆ ಕುಂಯಿ ಕುಂಯಿ ಎಂದು ಅದ್ರ ಬಾಶೇಲಿ ಏನೋ ಹೇಳ್ತಾ ನನ್ನ ಕಾಲ ಬುಡ್ಕೆ ಬಿದ್ಕಂಡ್ತು. ನಮ್ಮ ದೇವಸ್ಥಾನದಲ್ಲಿ 'ಯಾರಿಗೆ ಯಾರುಂಟು ಯರವಿನ ಸಂಸಾರ' ಎಂದೇನೊ ಭಜನೆ ಹೇಳ್ತಿದ್ರು ಅದು ಅರ್ಥ ಆಯ್ತು. ನಾಕು ದಿನ ಉಪಾಸ ಇದ್ದೆ. ಬರೀ ಮಳೆ, ಮೋಡ, ನೀರು ನೋಡೋದು. ಒಂದಿನ ಮಳೆ ಸುರಿತ ಇದ್ದ ಮೋಡದ ಮಧ್ಯ ಸೂರ್ಯ ಉರಿಯೋದ ಕಂಡೆ; ಮಳೆ ಮೋಡ ಸೀಳ್ಕಂಡು ಮಿಂಚಿನ ಬೆಂಕಿ ಬಂತು! ಕುಲುಮೇಲಿ ಕಬ್ಬಣ ಕೆಂಪಗೆ ಕಾಯ್ಸಿದಾಗ ನೀರು ಬರ್ತಿದ್ದು ನೆನಪಾಯ್ತು! ಮಜಾ ಅನಸ್ತು. ಬೆಂಕೀಲಿ ನೀರು ನೀರಲ್ಲಿ ಬೆಂಕಿ ಅರೆರೆ ಬ್ಯಾರೆ ಬ್ಯಾರೆ ಅಲ್ವೇ ಅಲ್ಲ! ಜೀವನಾನೂ ಇದೇ ರೀತಿ ಅನಸ್ತು. ಬೇಜಾರು ಸಂತೋಷ ಎಲ್ಲ ಒಂದೇ. ನೆಗ್ಸು ಊರವರಿಗೆ ಬುದ್ಧಿ ಕಲಿಸೋದಕ್ಕೆ ಬರ್ತದೆ ಅಂತಿದ್ದೆ. ನನ್ನ ಮನಸಿಗೂ ಮದ್ದು ಅರಿತು ಅದು.

ನಮ್ಮೂರಲ್ಲಿ ನನಗೆ ಮಾತ್ರ ಹದ ಹಾಕೋದಕ್ಕೆ ಬಂದದ್ದೆ ಪಜೀತಿ ಆಯ್ತು. ಬ್ಯಾರೆ ಮಂದಿ ಹದ ಹಾಕಿದ್ರೂ ಜನ ಸರಿ ಆಗ್ಲಿಲ್ಲ ಅಂತಾರೆ. ನಮಗೂ ಕಲ್ಸು ಎಂದು ಕಾಡ್ತಿದ್ರು. ಒಂದೆರ್ಡು ಸರ್ತಿ ಹೀಂಗೀಂಗೆ ಎಂದು ಕುಲ್ಮೇಲಿ ಕೂರ್ಸ್ಕಂಡು ಹೇಳ್ದೆ. ಕೊನೆಗೂ ಅವ್ರಿಗೆ ಹದ ಹಿಡಿಯೋದಕ್ಕೆ ಬರ್ಲೇ ಇಲ್ಲ. ನೀ ಸರಿ ಹೇಳಿ ಕೊಡ್ಲಿಲ್ಲ ನಿನ್ನ ಅಜ್ಜ ಬೀಗ ಮಾಡೋದ, ಕೋವಿ ಮಾಡೋದ ಎಷ್ಟು ಜನಕ್ಕೆ ಕಲಿಸ್ಲಿಲ್ಲ ಎಂದು ಸಂಶಯ ಪಟ್ಟರು. ನನ್ನ ನಂಬಲೇ ಇಲ್ಲ ಅವರು. ನಾ ಹದ ವಿದ್ಯೆ ಕಲಿಸ್ಲಿಲ್ಲ ಎಂದು ಅವರು ತಪ್ಪು ತಿಳ್ಕಂಡ ಹಾಂಗೆ ಅದೇ ಕಾರಣಕ್ಕೆ ನನ್ನ ಬಚಾವು ಮಾಡೋದಕ್ಕೆ ಅವರ್‍ಯಾರೂ ಬರ್ಲಿಲ್ಲ ಎಂದು ನಾನು ಅಪಾರ್ಥ ಮಾಡ್ಕಂಡೆ. ಎಲ್ರೂ ಒಂದೇ ದೋಣಿ ಕಳ್ಳರೇ."

"ಊರಲ್ಲಿ ಒಬ್ರಿಗೊಬ್ರು ಅಪಾರ್ಥ ಮಾಡ್ಕಂಡು ಸಂಸಾರ ಮಾಡೋದು ಸರಿ ಅಲ್ಲ ನೋಡಿ.